"ಉರುಳಿ ಬಿದ್ದೋನು ಮೋಹಿತ್, ಕಾಲಿಯಾನನ್ನೇ ಮೊಸಳೆ ತಿಂದಿತು ಅಂತ ಹೇಗೆ ಪತ್ತೆ ಮಾಡಿದ್ರಿ?"

ಡಿಸೋಜ ಕೇಳಿದ.

"ಮನೆಯ ಪಕ್ಕದ ಗೇಟಿನಿಂದ ಮೂಡಿದ ಶೂ ಗುರುತುಗಳು ಮೋಹಿತಂದು ಅಂತ ಊಹಿಸೋಕೆ ಬುದ್ಧಿವಂತಿಕೆಯೇನೂ ಬೇಡ. ಅದೇ ಗುರುತು ಪ್ರಪಾತದತ್ತ ಜಾರಿದ ಶೂ ಗುರುತಿಗೆ ತಾಳೆಯಾಗುತ್ತಿತ್ತು. ಮೋಹಿತನೇ ಜಾರಿದವ ಅಂತ ಖಾತ್ರಿಯಾಯ್ತು. ಅಲ್ಲಿ ಚೆಲ್ಲಿದ ರಕ್ತದ ಮೊತ್ತ, ಹರಡಿದ ರೀತಿ ನೋಡಿದ್ರೆ ಪ್ರಾಣಿಗಳು ಕಚ್ಚಿ ಹಿಡಿದಾಗ ಚಿಮ್ಮಿದಂತಿದೆ. ಕಾಲಿಯಾನ ಚರವಾಣಿ ಕೊನೆಯ ಬಾರಿಗೆ ಕಂಡಿದ್ದು ಅಲ್ಲಿಯ ಟವರಿನ ರೇಂಜಿನಲ್ಲಿ. ಆಮೇಲೆ ಏಕಾಏಕಿ ಮಾಯವಾಯ್ತು. ಯಾಕೆ? ಆತ ಕೆಳಗಿಳಿದು ಬಂದಿದ್ರೆ, ಬೇರೆ ಟವರಿನಲ್ಲಿ ಅದು ಕಂಡಿರಬೇಕಲ್ವೆ? ಹಾಗಿದ್ರೆ ಆತನ ಮೊಬೈಲು ಎಲ್ಲಿ ಹೋಯ್ತು? ಮೊಸಳೆ ತಿನ್ನುವಾಗ ಅದರ ದೇಹ ಸೇರಿರಬೇಕು. ಕಾಲಿಯಾ ಸತ್ತಿರಲೇಬೇಕೆಂದು ತರ್ಕಿಸಿದೆ."

"ಆದ್ರೆ ಸಾರ್, ಆ ಮನುಷ್ಯನ ಕಾಲು ಸರಿಯಾಗಿತ್ತು. ಕ್ರಚಸ್ ಸುಮ್ನೆ ಹಿಡ್ಕೊಂಡಿದ್ದ ಅಷ್ಟೇ."

"ಹಾಂ. ನೋಡ್ದೋರು ತನ್ನನ್ನು ಒಂಟಿ ಕಾಲಿನ ಮನುಷ್ಯ ಅಂತ ತಪ್ಪು ಭಾವಿಸಲಿ ಅಂತ ಬಳಸಿರಬೇಕು. ಇರಲಿ, ಅಲ್ಲಿದ್ದ ಪ್ರಾಣಿಯ ಹೆಜ್ಜೆ ಗುರುತು ಮೊಸಳೆಯದ್ದಾಗಿರಬೇಕೆಂದು ಊಹಿಸಿದೆ. ಚೂಪಾದ ವಸ್ತುವಿನ ಗುರುತುಗಳು ಮೊಸಳೆಯನ್ನು ನಿಯಂತ್ರಿಸಲು ಉಪಯೋಗಿಸಿದ ಅಂಕುಶದ್ದೆಂದು ತರ್ಕಿಸಿದೆ. ಮೊಸಳೆಯನ್ನು ಮೃಗಾಲಯದಿಂದ ತಾನೇ ತಂದಿರಬೇಕು? ಇಲ್ಲಿಗೆ ಬಂದಾಗ ಬದ್ರಿ ಕಂಡ. ಕಾಲಿಯಾ ಯಾರೆಂದು ಹೇಳ್ತೀನಿ. ಮೋಹಿತನ ಕೋಣೆಯಲ್ಲಿ ಗುಜರಾತಿ ಪತ್ರಿಕೆಗಳಿದ್ದವು. ಅವನೇಕೆ ತರಿಸುತ್ತಾನೆ ಅಂತ ಅಚ್ಚರಿಯಾಯ್ತು. ಸುಮಾರು ಕಳೆದ ಒಂದು ವರ್ಷದ ಪತ್ರಿಕೆಗಳಿದ್ದವು. ಜನವರಿ ಆರರ ಪತ್ರಿಕೆಯಲ್ಲಿದ್ದ ಸುದ್ದಿ ನನ್ನ ಗಮನ ಸೆಳೆಯಿತು. ಕಾಂತಿಲಾಲ್ ಅನ್ನುವ ವಜ್ರ ವ್ಯಾಪಾರಿಯೊಬ್ಬನ ಸುಮಾರು ಎರಡು ಕೋಟಿ ಬೆಲೆಬಾಳುವ ವಜ್ರ ಕಳವಾದ ವರದಿ ಪ್ರಕಟವಾಗಿತ್ತು. ಆ ಕಂಪೆನಿಯ ಇಬ್ಬರು ಮಾರಾಟ ಪ್ರತಿನಿಧಿಗಳು ನಾಪತ್ತೆಯಾಗಿದ್ದು, ಅವರೇ ಅಪಹರಿಸಿರಬೇಕೆಂದೂ ವರದಿಯಾಗಿತ್ತು. ಇಬ್ಬರ ಫೋಟೊಗಳೂ ಇದ್ದವು. ಹೆಸರುಗಳು ವಿಕ್ಟರ್ ಮತ್ತು ಆರ್ಮುಗಂ ಎಂದಿತ್ತು. ಮೀಸೆ ದಾಡಿಯಿದ್ದ ವಿಕ್ಟರ್ ಮೋಹಿತನನ್ನು ಹೋಲುತ್ತಿದ್ದ. ಆತ ತನ್ನ ಹೇರ್ ಸ್ಟೈಲು ಬದಲಿಸಿದ್ದ ಗುರುತಾಗದಂತೆ. ಮೋಹಿತನೇ ಆತ ಅಂತ ತರ್ಕಿಸಿದೆ. ಅವನು ಅಂಗಡಿಯಲ್ಲಿ ಕೆಲಸಕ್ಕೆ ಸೇರುವಾಗಲೇ ವಜ್ರ ಲಪಟಾಯಿಸುವ ಉದ್ದೇಶ ಹೊಂದಿರಬೇಕೆಂಬುದನ್ನು ಅದರಿಂದ ಊಹಿಸಬಹುದು. ಅವನ ಕೋಣೆಯಲ್ಲಿದ್ದ ಡೈಮಂಡ್ ಡಿಪ್ಲೋಮಾದ ನಕಲಿ ಸರ್ಟಿಫಿಕೇಟು ನನ್ನ ಊಹನೆಯನ್ನು ದೃಢಪಡಿಸಿತು. ವರ್ಷಿಣಿಯ ಬಳಿ ಹೋಟೆಲ್ ಉದ್ಯೋಗ ಅಂತ ಸುಳ್ಳು ಹೇಳಿದ್ದ! ಸಹಜವಾಗಿ, ಅವನು ತನ್ನ ವೈಯಕ್ತಿಕ ದಾಖಲೆಗಳನ್ನು ಕೂಡಾ ಸುಳ್ಳು ನೀಡಿರುತ್ತಾನೆ. ಪೊಲೀಸರಿಗೆ ಸಿಕ್ಕಿ ಬೀಳಬಾರದೆಂದು. ವಜ್ರ ಲಪಟಾಯಿಸಿ, ಇಲ್ಲಿಗೆ ಬಂದ, ಮೋಹಿತ ಹೆಚ್ಚಾಗಿ ಹೊರಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ವರ್ಷಿಣಿ ಇದನ್ನು ಖಚಿತಪಡಿಸಿದ್ದಾಳೆ. ಆ ಪ್ರಕರಣದ ತನಿಖೆಯ ಪ್ರಗತಿಯ ಮೇಲೆ ನಿಗಾ ಇಡಲು ಆತ ಗುಜರಾತ್ ಸಮಾಚಾರ್ ಪತ್ರಿಕೆ ತರಿಸುತ್ತಿದ್ದ."

"ಡೈರಿಯಲ್ಲಿ ಕೆಲವೊಮ್ಮೆ 'ಎನ್ ಡಿ' ಅಂತ ಗೀಚಿದ್ದನಲ್ಲ. ಅದಕ್ಕೇನು ಅರ್ಥ?"

ನನ್ನ ಪ್ರಶ್ನೆಗೆ ಕರಮಚಂದ ನಗು ಬೀರಿದ,